ಮುಖಂಡರಿಂದ ಎದುರಿಸಿದ ಟೀಕೆ, ಆತಂಕಗಳಿಂದ ಅವರು ವರ್ಷಗಟ್ಟಲೆ ನೊಂದಿದ್ದಾರೆ. ಅವರ ಜೀವಕ್ಕೇ ಅಪಾಯವೊದಗುವ ಸಂದರ್ಭಗಳನ್ನು ಎದುರಿಸಿ ನಿಂತಿದ್ದಾರೆ. ಬರೆಯುವುದನ್ನು ನಿಲ್ಲಿಸಬೇಕು ಎಂಬ ಒತ್ತಡ ತಂದಾಗಲೂ 'ನಾನು ಸತ್ತರೂ ಸರಿಯೇ, ಬರವಣಿಗೆ ನಿಲ್ಲಿಸಲಾರೆ' ಎಂದದ್ದು ಸಾಮಾನ್ಯ ಸಂಗತಿಯಲ್ಲ. ಸಾಮಾನ್ಯ ಸಂದರ್ಭದಲ್ಲಿ ಸಮಾಜದ ಒಡಕುಗಳ ಕುರಿತು ಬರೆಯುವುದು ಪ್ರಗತಿಪರತೆಯ, ಹೆಮ್ಮೆಯ ವಿಚಾರವಾಗಿದ್ದರೆ ಬಾನು ಅವರ ವಿಚಾರದಲ್ಲಿ ಅದು ಧರ್ಮವಿರೋಧಿಯಾಗಿ ಬಿಂಬಿತವಾಯಿತು. ಬರವಣಿಗೆ, ಹೋರಾಟ ಎರಡೂ ಅವರ ಪಾಲಿಗೆ ಒಂದೇ ಮತ್ತು ಜೀವನ್ಮರಣದ ಪ್ರಶ್ನೆಯೂ ಹೌದು.

ಬಾನು ಅವರ ಕಥೆಗಳು ಮಹಿಳೆ ತನ್ನ ಚೈತನ್ಯವನ್ನು ದಮನಿಸುವ ವ್ಯವಸ್ಥೆಯೊಳಗೆ ನಡೆಸುವ ಹೋರಾಟದ ಕಥೆಗಳಾಗಿ ಕಾಣುತ್ತವೆ. ಇಲ್ಲಿ ಬಾಲ್ಯದ ಸುಂದರ ಜಗತ್ತಿದೆ, ಬೆಳೆದಂತೆ ಕನಸು ಕಾಣುತ್ತಲೇ ವ್ಯವಸ್ಥೆಯ ವಿಷಮತೆ ಕಂಡು ತಲ್ಲಣಿಸುವ ಮನಸ್ಸು ಇದೆ. ಬಡತನ, ಪಿತೃಪ್ರಧಾನ ವ್ಯವಸ್ಥೆ, ಪರಕೀಯ ಪ್ರಜ್ಞೆಗಳಿಂದ ಬದುಕುಗಳು ಛಿದ್ರವಾಗುತ್ತಿವೆ. ನವುರಾದ ಭಾವಜಗತ್ತು, ಬದುಕು ಕಟ್ಟಿಕೊಳ್ಳುವ ಹಂಬಲ, ಇಲ್ಲಿನ ಕ್ರೌರ್ಯ, ಯಜಮಾನಿಕೆಗಳ ಮಧ್ಯೆ ಕಮರಿ ಹೋಗುತ್ತವೆ. ರಾಹಿಲ, ಆಶ್ರಫ್, ಶಾಯಿಸ್ತಾ – ಹೀಗೆ ಅಸಂಖ್ಯ ಹೆಣ್ಣುಮಕ್ಕಳು ಬದುಕುವ ಅವಕಾಶ ದೊರೆಯದೇ, ಉಸಿರಾಡಲು ಅವಕಾಶ ದೊರೆಯದೇ ನಲುಗಿಹೋಗುತ್ತಿದ್ದಾರೆ.

'ಶಾಯಿಸ್ತ ಮಹಲಿನ ಕಲ್ಲು ಚಪ್ಪಡಿಗಳು' ಕಥೆಯ ಆರಂಭವೇ ವಿಶಿಷ್ಟವಾದದ್ದು. ಜೀನತ್ ತನ್ನ ಮತ್ತು ತನ್ನ ಬಾಳಸಂಗಾತಿ ಮುಜಾಹಿದ್ ಬಗ್ಗೆ ತಿಳಿಸುವಾಗ ಮುಜಾಹಿದ್‌ನನ್ನು ಹೆಸರಿಸಲು ಪದ ಹುಡುಕುತ್ತಾಳೆ. ಮನೆಯಾತ, ಯಜಮಾನ, ಗಂಡ, ಪತಿ ಯಾವ ಪದವೂ ಸರಿಹೊಂದದೇ ಕೊನೆಗೆ, 'ಯಾವ ಧರ್ಮವಾದರೂ ಸರಿಯೇ, ಅದರಲ್ಲಿ ಪತ್ನಿ ಪತಿಯ ಮೋಸ್ಟ್ ಒಬೀಡಿಯೆಂಟ್ ಜೀತದಾಳು' ಎನ್ನುವ ಮೂಲಕ ಪಿತೃಪ್ರಧಾನ ವ್ಯವಸ್ಥೆಯ ಕಬಂಧ ಬಾಹುಗಳನ್ನು ಅನಾವರಣಗೊಳಿಸುತ್ತಾಳೆ. ಮೇಲಿನ ಎಲ್ಲ ಪದಗಳೊಳಗೆ ಹುದುಗಿರುವ ಅಧಿಕಾರ ಮತ್ತು ಅಧೀನತೆಯ ಸಂಬಂಧ ಈ ಮೂಲಕ ನಮಗೆ ಅರಿವಾಗುತ್ತಾ ಹೋಗುತ್ತದೆ. 'ಲವ್ ಬರ್ಡ್' ಕಥೆ ಪ್ರೀತಿಗಿಂತ ಸ್ವಾರ್ಥ ಮೇಲುಗೈ ಪಡೆದಾಗ ಅನಿವಾರ್ಯವಾಗಿ ಮುಂದುವರೆಯುವ ನಿರರ್ಥಕ ಬದುಕನ್ನು ಬಿಚ್ಚಿಡುತ್ತದೆ. ಅನ್ಯೋನ್ಯತೆಯ ಸಂಕೇತವಾದ ಲವ್ ಬರ್ಡ್‌ಗಳು ಕೊನೆಗೂ ಪಂಜರದೊಳಗೇ ಬಂಧಿಯಾಗಿರುವುದು ಮಾರ್ಮಿಕವಾಗಿದೆ. 'ಒಮ್ಮೆ ಹೆಣ್ಣಾಗು ಪ್ರಭುವೆ' ಕಥೆ ಅಸಹಾಯಕ ಸ್ಥಿತಿಗೆ ದೂಡಲಾದ ಹೆಣ್ಣು ದೇವರ ಜೊತೆ ಮಾಡಿಕೊಳ್ಳುವ ನಿವೇದನೆಯ ರೂಪದ ಕಥೆ. ಬೆಳಗೆರೆ ಜಾನಕಮ್ಮ ಕೇಳುವ 'ಗಿಡವೆಂದು ಬಗೆದೆಯೋ ಹೆಣ್ಣು ಜನ್ಮದ ಒಡಲ, ಫಲವ ಸೃಜಿಸುವುದಕೆ' ಎಂಬ ಪ್ರಶ್ನೆ ಇಲ್ಲಿ ಇನ್ನೊಂದು ಬಗೆಯಲ್ಲಿ ಕಾಣಿಸಿಕೊಳ್ಳುತ್ತದೆ. ಕೊನೆಯಲ್ಲಿ ನಿವೇದಕಿ "ನೀನು ಇನ್ನೊಮ್ಮೆ ಪ್ರಪಂಚ ನಿರ್ಮಿಸುವುದಾದಲ್ಲಿ ಗಂಡು-ಹೆಣ್ಣನ್ನು ಸೃಷ್ಟಿಸುವುದಾದಲ್ಲಿ ಅನುಭವವಿಲ್ಲದ ಕುಂಬಾರನಂತಾಗಬೇಡ, ಬಾ... ಭೂಮಿಗೆ ಒಮ್ಮೆ ಹೆಣ್ಣಾಗು ಪ್ರಭುವೆ!" ಎಂದು ಆಹ್ವಾನಿಸುತ್ತಾಳೆ. ಪ್ರಭುವಿಗೆ ನೀಡಿದ ಈ ಆಹ್ವಾನ ಪ್ರಭುತ್ವಕ್ಕೆ ನೇರವಾಗಿ ನಾಟಿತು. ಈ ಕಾರಣಕ್ಕಾಗಿಯೇ ಬಾನು ಅವರ ಮೇಲೆ ಟೀಕಾ ಪ್ರಹಾರಗಳು ಆರಂಭವಾದವು. ಅದನ್ನು ಅವರು ಅಸೀಮ ದಿಟ್ಟತನದಿಂದ ದಾಟಿ ಬಂದರು. ಕಥೆಗಳ ಜೊತೆಗೇ ವೈಚಾರಿಕ ಬರಹ, ಕವಿತೆ, ವರದಿಗಳು ಹೀಗೆ ಬಾನು ಅವರ ಬರಹಗಳ ಹರಹು ವಿಸ್ತಾರವಾಗಿದೆ.

ಗಂಡು ಮಕ್ಕಳು, ಹೆಣ್ಣು ಮಕ್ಕಳು ಸೇರಿದಂತೆ ಒಟ್ಟು ಸಮಾಜ ಈ ವಿಷಮ ವ್ಯವಸ್ಥೆಯೊಳಗೆ ನರಳುತ್ತಿದೆ. ಆದರೆ ಬೆಳಕಿಂಡಿಗಳೇ ಇಲ್ಲವೆಂದಲ್ಲ, 'ಕರಿನಾಗರಗಳು' ಕಥೆಯಲ್ಲಿ ಆಮಿನಾ, ಜುಲೇಖಾ ಬೇಗಂ, ಮುತವಲ್ಲಿ ಸಾಹೇಬರು ಮತ್ತು ಅವರ ಜೊತೆಗಿರುವವರ ಕ್ರೂರ ವರ್ತನೆಯ ವಿರುದ್ಧ ಪ್ರತಿಭಟಿಸುವ ಹೆಣ್ಣುಮಕ್ಕಳಿದ್ದರೆ – ಪತ್ನಿಯನ್ನು ಅಪಾರ ಪ್ರೀತಿಸುವ, ಅವಳ ತಲ್ಲಣವನ್ನು ಅರ್ಥ ಮಾಡಿಕೊಳ್ಳಬಲ್ಲ 'ಸರಿದ ಕಾರ್ಮೋಡ' ಕಥೆಯಲ್ಲಿ ಬರುವ ನವಾಬ್‌ನಂತಹ ಗಂಡುಮಕ್ಕಳೂ ಇದ್ದಾರೆ. ಆದರೆ ಕರಾಳ ನೆರಳು ಚಾಚಿರುವ ದೊಡ್ಡ ವ್ಯವಸ್ಥೆಯ ಮುಂದೆ ಇಂಥವರು ತುಂಬಾ ವಿರಳ. ಇನ್ನೊಂದು ಕಡೆಯಲ್ಲಿ ಸಮುದಾಯದೊಳಗಣ ತಲ್ಲಣಗಳ ಜೊತೆಗೆ ಸಮುದಾಯ ಒಟ್ಟಾಗಿ ಎದುರಿಸುತ್ತಿರುವ ಅಭದ್ರತೆ, ಆತಂಕಗಳೂ ಇವೆ. ಒಳಗೆ